(ಈ) ಗೋಕಾಕ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ಥಿ.

+ ಶ್ರೀ ಚಂದ್ರಶೇಖರ ಸದಾಶಿವ ನಾಯಕ್ (ಗೋಕಾಕ) :— ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯು ಪಿಡಬ್ಲ್ಯೂಡಿಗೆ ಸಂಬಂಧಪಟ್ಟಿದ್ದು. ಸಂಬಂಧಪಟ್ಟ ಸನ್ಮಾನ್ಯ ಸಚಿವರು ಇಲ್ಲ. ಉತ್ತರವನ್ನು ಯಾರಾದರೂ ಕೊಟ್ಟರೆ ಪ್ರಸ್ತಾಪ ಮಾಡಬಹುದು. ಮಾನ್ಯ ಅಧ್ಯಕ್ಷರೆ ನಮ್ಮಲ್ಲಿ ಪಿಡಬ್ಲ್ಯೂಡಿ ರಸ್ತಗಳು ತುಂಬಾ ಹದಗೆಟ್ಟು ಹೋಗಿವೆ. ಈ ರಸ್ತೆಗಳನ್ನು ನಬಾರ್ಡ್ ರಸ್ತೆಗಳು ಎಂದು ಸೇರಿಸಿದರೆ 30 ವರ್ಷಗಳಿಂದ ಆದಂಥ ಡಾಂಬರೀಕರಣ ಕಾರ್ಯವನ್ನು ಮತ್ತೊಮ್ಮೆ ತೆಗೆದುಕೊಳ್ಳುವ ಹಾಗಿಲ್ಲ. ನಮಗೆ 45 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಕೊಡಿ ಎಂದು ಹೇಳಿದರು. ಅದು ನಂತರ ಹೋಯಿತು. ಮೊದಲು ಕೊಟ್ಟ 30 ಲಕ್ಷ ರೂಪಾಯಿಗಳ ಅಂದಾಜು ಕೆಲಸ ಈಗ ಇಲ್ಲ. ಅದೇ ರೀತಿಯಲ್ಲಿ ಡಾಂಬರ್ ಬರುವುದು ಜೂನ್ ತಿಂಗಳಲ್ಲಿ. ಡಿಸೆಂಬರ್ ತನಕ ಇದ್ದಂಥ ಡಾಂಬರನ್ನು ತಗ್ಗು ತುಂಬಲು ಉಪಯೋಗ ಮಾಡುತ್ತಾರೆ ಅದು ಅಲ್ಲಿಗೆ ಮುಗಿದು ಹೋಗುತ್ತದೆ. ಮರು ಡಾಂಬರೀಕರಣ ಎಂಬ ಮಾತು ನಬಾರ್ಡ್ ವ್ಯಾಪ್ತಿಯಲ್ಲಿ ಇಲ್ಲ. 30 ವರ್ಷಗಳ ಹಿಂದೆ ಆದಂಥ ರಸ್ತೆಗಳಿಗೆ ಮರು ಡಾಂಬರೀಕರಣವಿಲ್ಲ. ತಗ್ಗು ತುಂಬುವ ಕೆಲಸವೂ ಆಗಲಿಲ್ಲ, ಅಂದರೆ ಸಂಚಾರ ವ್ಯವಸ್ಥೆಯು ಬಂದ್ ಆಗುವಂತಾಗಿದೆ. ಇದು ಕೇವಲ ನನ್ನ ಕ್ಷೇತ್ರಕ್ಕೆ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳಿಗೂ ಸಂಬಂಧಪಟ್ಟ ವಿಚಾರವಾಗಿದೆ. ಇದಕ್ಕೆ ಹಣ ಕೊಡಿ ಎಂದಾಗ ಬಾಕಿ ಬಿಲ್ ಬಹಳ ಇದೆ, 95 ಕೋಟಿ, 55 ಕೋಟಿ ರೂಪಾಯಿಗಳಷ್ಟು ಬಾಕಿ ಬಿಲ್ ಇದೆ ಎಂದು ಹೇಳುತ್ತಾರೆ. ಇಲ್ಲಿ ಮರು ಡಾಂಬರೀಕರಣವನ್ನು ಪ್ರಧಾನವಾಗಿ ನಬಾರ್ಡ್‌ಗೆ ಸೇರಿಸಿದ್ದರೆ ಒಳ್ಳೆಯದಾಗುತ್ತಿತ್ತು ಎಂಬುದು ನಮ್ಮ ಭಾವನೆ. ಇನ್ನು ಕಚ್ಚಾರಸ್ತೆ ಕೆಲಸದಲ್ಲಿದ್ದ ದಿನಗೂಲಿ ನೌಕರರನ್ನು ಖಾಯಂಗೊಳಿಸಿದ್ದೀರಿ. ಅವರನ್ನು ಇದ್ದಲ್ಲಿಂದ ಬೇರೆ ಕಡೆಗೆ ಹಾಕಿದ್ದೀರಿ. ಅಲ್ಲಿ ಮಣ್ಣು, ಕಲ್ಲು ಹಾಕಲು ಯಾರೂ ಇಲ್ಲ. ಹೀಗಾಗಿ ಆ ರಸ್ತೆಗಳಲ್ಲಿ ಮನುಷ್ಯರು ಮಾತ್ರವಲ್ಲ ದನಗಳೂ ಕೂಡ ತಿರುಗಾಡುವ ಹಾಗಿಲ್ಲ. ವಾಹನಗಳಂತೂ ಹೋಗುವುದೇ ಇಲ್ಲ. ದನಗಳು ಅಲ್ಲಿ ತಿರುಗಾಡುವ ಹಾಗಿಲ್ಲ. ವಾಹನಗಳಂತೂ ಹೋಗುವುದೇ ಇಲ್ಲ. ದನಗಳು ಅಲ್ಲಿ ತಿರುಗಾಡಿದರೆ ಅವುಗಳ ಕಾಲು ಹೊರಟುಹೋಗುವ ಭಯ ಅವಕ್ಕೂ ಆಗಿಬಿಟ್ಟಿದೆ. ಆದ್ದರಿಂದ ಈ ಪಿಡಬ್ಲ್ಯೂಡಿ ರಸ್ತೆಗಳಿಗೆ ಬಾಕಿ ಇರುವ ಬಿಲ್ಲನ್ನು ಕೊಡುವ ವ್ಯವಸ್ಥೆಯಾಗಬೇಕು. ಅಥವಾ ನಬಾರ್ಡ್‌ಗೆ ಇದನ್ನು ಸೇರಿಸಬೇಕು. ಅದು ಆಗಲು ಇನ್ನೂ ಒಂದೆರಡು ವರ್ಷಗಳು ಬೇಕಾಗಬಹುದು. ಅದೇ ರೀತಿಯಲ್ಲಿ ನೀರಾವರಿಗೆ ಒಳಪಟ್ಟಂಥ ರಸ್ತೆಗಳು ಹೇಗಿವೆ ಅಂದರೆ, ಇದೇ ವರ್ಷ ನಮ್ಮ ಗೋಕಾಕ್‌ದಲ್ಲಿ 12500 ಹೆಕ್ಟೇರ್ ಪ್ರದೇಶವು ನೀರಾವರಿಗೆ ಒಳಪಟ್ಟಿತು. ಇದರಿಂದಾಗಿ ಮೊದಲು ಚೆನ್ನಾಗಿದ್ದ ರಸ್ತೆಗಳು ನೀರಿನಿಂದಾಗಿ ತಗ್ಗು ಬಿದ್ದು, ಸಿಂಕ್ ಆಗಿರುವುದರಿಂದ ಅದನ್ನು ಡಾಂಬರೀಕರಣ ಮಾಡುವ ಹಾಗಿಲ್ಲವಾಗಿದೆ. ಒಂದು ವೇಳೆ ಮಾಡೋಣ ಅಂದರೆ ಅದಕ್ಕೆ ಡಾಂಬರು ಪೂರೈಕೆಯೂ ಇಲ್ಲ ಎಂದರೆ ಬಹಳ ವ್ಯಥೆಪಡಬೇಕಾಗುತ್ತದೆ. ಈ ಬಗ್ಗೆ ಸರಕಾರವು ಏನು ವಿಚಾರ ಮಾಡಿದೆ ಎನ್ನುವುದನ್ನು ತಿಳಿಸಬೇಕು.

ಛೇರ್ಮನ್ :— ಒಟ್ಟು 21 ಶೂನ್ಯ ವೇಳೆಯ ಪ್ರಸ್ತಾವಗಳು ಇವೆ. ಮಾನ್ಯ ಸದಸ್ಯರುಗಳು ಸಂಕ್ಷಿಪ್ತವಾಗಿ ಮುಗಿಸಬೇಕು, ಸಹಕರಿಸಬೇಕು,

ಶ್ರೀ ಚಂದ್ರಶೇಖರ ಸದಾಶಿವ ನಾಯಕ್ :— ನನ್ನ ವಿಚಾರವು ಎಲ್ಲರಿಗೂ ಸಂಬಂಧಪಟ್ಟ ವಿಚಾರವಾಗಿದೆ. ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೀರಿ. ನನಗೂ ಸ್ವಲ್ಪ ಸಮಯ ಕೊಡಿ. ಜೀರೋ ಅವರ್‌ನಲ್ಲಿ 20 ನಿಮಿಷಗಳವರೆಗೂ ಮಾತನಾಡಿದ್ದು ನಮಗೆ ಗೊತ್ತಿದೆ. ನಾನು ಎಲ್ಲರಿಗೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪಿಸುವುದರ ಮೂಲಕ ಒಂದು ಪರಿಹಾರ ದೊರಕಲಿ ಎಂದು ಪ್ರಸ್ತಾಪಿಸುತ್ತಿದ್ದೇನೆ.

ಛೇರ್ಮನ್ :— ಇವೊತ್ತು ಶುಕ್ರವಾರ, ಇನ್ನೂ 21 ಜನರು ಪ್ರಸ್ತಾಪ ಮಾಡಬೇಕು. ಸಂಕ್ಷಿಪ್ತವಾಗಿ ವಿಚಾರಗಳನ್ನು ಮಂಡಿಸಿ, ತಾವುಗಳು ಅರ್ಥ ಮಾಡಿಕೊಂಡು ಸಹಕರಿಸಬೇಕು.

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ :— ಇಲ್ಲಿ ಲೋಕೋಪಯೋಗಿ ಸಚಿವರೂ ಕೂಡ ಇಲ್ಲ. ಈಗ ಬಾಕಿ ಬಿಲ್ ಬಗ್ಗೆ ಏನು ಮಾಡುತ್ತೀರಿ? ಜೂನ್ ತಿಂಗಳಲ್ಲಿ ಡಾಂಬರ್ ಕೊಟ್ಟರೆ ಅದರ ಉಪಯೋಗವನ್ನು ಹೇಗೆ ಮಾಡುವುದು? ನಬಾರ್ಡ್‌ನವರು ಮರು ಡಾಂಬರೀಕರಣ ಮಾಡುವುದಿಲ್ಲ. ಸರಕಾರದಿಂದ ರಸ್ತೆಗಳಿಗೆ ಮಣ್ಣು ಹಾಕಿಸಲು ದಿನಗೂಲಿ ನೌಕರರು ಇಲ್ಲ, ಇದಕ್ಕೆ ಪರಿಹಾರ ಏನು? ಈ ಪ್ರಸ್ತಾವವನ್ನು ಸೋಮವಾರ ಬೇಕಾದರೂ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗು ಪಂಚಾಯತ್ ರಾಜ್ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇವೆ. ಸೋಮವಾರದಂದು ಅವರಿಗೆ ಪ್ರಸ್ತಾಪ ಮಾಡಲು ಅವಕಾಶವನ್ನು ಕೊಡಿ.

(ಉ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕುಡಿಯುವ ನೀರಿಗೋಸ್ಕರ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಕೇಂದ್ರದಿಂದ, ವಿಶ್ವಬ್ಯಾಂಕಿನಿಂದಲೂ, ಕಿರುನೀರು ಸರಬರಾಜು ಇರಬಹುದು, ನಲ್ಲಿ ನೀರಿನ ಯೋಜನೆ ಇರಬಹುದು ಸಾಕಷ್ಟು ಹಣ ಬರುತ್ತಿದೆ. ಸರ್ಕಾರವೂ ರಾಜ್ಯದ ಎಲ್ಲಾ ಭಾಗದಲ್ಲೂ, ಈ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ನಮಗೆಲ್ಲಾ ಗೊತ್ತಿದೆ. ದುರಾದೃಷ್ಟ ಇವತ್ತು ಈ ಯೋಜನೆಗಳ್ಯಾವುವೂ ಕಾರ್ಯಗತವಾಗದಂತಾಗಿವೆ ಕಾರಣ ಇಷ್ಟೆ, ಕೇಬಿಯವರು ಯೋಜನೆಗಳಿಗೆ ಸಂಪರ್ಕ ಕಲ್ಪಿಸುತ್ತಿಲ್ಲ. ಅಂದರೆ ಅನಗತ್ಯವಾಗಿ ವಿಳಂಬ ಮಾಡುತ್ತಿದ್ದಾರೆ. ಈ ಯೋಜನೆಗಳಿಗೆ ಬೇಕಾದ ಸಾಮಗ್ರಿಗಳು ಯಾವ ಕಚೇರಿಯಲ್ಲೂ ಸಿಗುವುದಿಲ್ಲ. ಕಚೇರಿಯಲ್ಲಿ ಕೇಳಿದರೆ ಕುಡಿಯುವ ನೀರಿನ ಯೋಜನೆಗಳಿಗೆ ಈಗಾಗಲೇ